# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

ಸಿ ಎಸ್ ಸುಧೀರ್, ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com

# ಹಣಕಾಸಿನ ಭದ್ರತೆಗೆ ಸಪ್ತ ಸೂತ್ರಗಳು

**1.) ಊರು ಹೆಸರು ಬೇಡ. ನಾನು ಹಣಕಾಸಿನ ವಿಚಾರದಲ್ಲಿ ಸಾಕಷ್ಟು ನೊಂದಿದ್ದೇನೆ. ಸಾಲದ ಜತೆಗೆ ಆರ್ಥಿಕ ಸಮಸ್ಯೆಗಳು ದ್ವಿಗುಣವಾಗುತ್ತಿವೆ. ಈ ಎಲ್ಲಾ ಸಂಕಷ್ಟಗಳ ಮಧ್ಯೆ ಮನೆಯಲ್ಲಿ ಬೇಕುಗಳ ಪಟ್ಟಿ ಬೆಳೆಯುತ್ತಲೇ ಇದೆ. ಮತ್ತೆ ಸರಿದಾರಿಗೆ ಬಂದು ಆರ್ಥಿಕ ಶಿಸ್ತು ಅಳವಡಿಸಿಕೊಳ್ಳುವುದು ಹೇಗೆ? ಮಾರ್ಗದರ್ಶನ ಮಾಡಿ.**

ಆರ್ಥಿಕ ಶಿಸ್ತು ಆಳವಡಿಸಿಕೊಳ್ಳದ ಕಾರಣ ಶ್ರೀಮಂತರು ಬಡವರಾದ ನಿದರ್ಶನಗಳಿವೆ. ಹಾಗೆಯೇ ಆರ್ಥಿಕ ಶಿಸ್ತು ಅಳವಡಿಸಿಕೊಂಡ ಪರಿಣಾಮ ಮಧ್ಯಮ ವರ್ಗದವರು ಶ್ರೀಮಂತರಾದ ಉದಾಹರಣೆಗಳಿವೆ. ಹಾಗಾಗಿ ಯಾರಿಗೇ ಆದರೂ ವ್ಯವಹಾರದಲ್ಲಿ ಬದ್ಧತೆ ಇದ್ದರಷ್ಟೇ ಯಶಸ್ಸು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರಿಗೂ ಅನ್ವಯಿಸುವ ಏಳು ಸೂತ್ರಗಳನ್ನು ಇಲ್ಲಿ ವಿವರಿಸಿದ್ದೇನೆ.

### ಹಣದ ವಿಚಾರದಲ್ಲಿ ಎಲ್ಲ ಖರ್ಚಿಗೂ ಯಸ್ ಎನ್ನಬೇಡಿ:

ಯಾವುದಕ್ಕೆ ಹಣ ಖರ್ಚು ಮಾಡಬೇಕು, ಯಾವುದಕ್ಕೆ ಖರ್ಚು ಮಾಡಬಾರದು ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಜಾಣ್ಮೆಯನ್ನು ಯಾವ ವ್ಯಕ್ತಿ ರೂಢಿಸಿಕೊಂಡಿದ್ದಾನೋ ಆತ ಹಣಕಾಸಿನ ನಿರ್ವಹಣೆಯಲ್ಲಿ ಯಶಸ್ಸು ಗಳಿಸುತ್ತಾನೆ. ಯಾವ ವ್ಯಕ್ತಿ ಕುಟಂಬದವರ, ಸಂಬಂಧಿಕರ ಮುಲಾಜಿಗೆ ಸಿಕ್ಕಿ ಹಣ ವ್ಯಯಿಸುವ ಬಗ್ಗೆ ತೀರ್ಮಾನಿಸುತ್ತಾನೋ ಆ ವ್ಯಕ್ತಿ ಆರ್ಥಿಕ ಹಿನ್ನೆಡೆ ಅನುಭವಿಸುತ್ತಾನೆ ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಹೌದು ಮಕ್ಕಳು, ಪತ್ನಿ ಮತ್ತು ತಂದೆ ತಾಯಿಯೊಂದಿಗಿನ ಭಾವನಾತ್ಮಕ ಸಂಬಂಧಕ್ಕೆ ಜೋತು ಬಿದ್ದು ಮನೆಯ ಯಜಮಾನ ಹಣಕಾಸಿನ ತೀರ್ಮಾನಗಳನ್ನು ತೆಗೆದುಕೊಂಡರೆ ಹಣಕಾಸಿನ ಕೊರತೆ ನಿರಂತರವಾಗಿ ಕಾಡುವುದು ನಿಶ್ಚಿತ. ಹಣ ವ್ಯಯಿಸುವಾಗ ನಿಮ್ಮ ದೀರ್ಘಾವಧಿ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ.

### ಇವತ್ತು ಹೂಡಿಕೆ ಮಾಡಿ ನಾಳೆ ಪ್ರತಿಫಲ ಬಯಸಬೇಡಿ:

ಷೇರು ಮಾರುಕಟ್ಟೆಯಲ್ಲಿ ಅಥವಾ ಮ್ಯೂಚುವಲ್ ಫಂಡ್ ಗಳಲ್ಲಿ ಹೂಡಿಕೆ ಮಾಡುವಾಗ ದೀರ್ಘಾವಧಿ ಹೂಡಿಕೆಗಳ ಮೇಲೆ ಗಮನಹರಿಸಿ. ಇವತ್ತು ಹೂಡಿಕೆ ಮಾಡಿ ನಾಳೆಯಿಂದಲೇ ಪ್ರತಿಫಲ ಸಿಗಬೇಕು ಎಂದು ಬಯಸಿದರೆ ತಪ್ಪಾಗುತ್ತದೆ. ಹೂಡಿಕೆಗಳಲ್ಲಿ ಏರಿಳಿತಗಳು ಸಹಜ. ಯಾವುದೋ ಒಂದು ಕಂಪನಿಯಲ್ಲಿ ನೀವು ಮಾಡಿರುವ ಹೂಡಿಕೆಗೆ ತಾತ್ಕಾಲಿಕ ಹಿನ್ನಡೆಯಾಗಿದೆ ಎಂದ ಮಾತ್ರಕ್ಕೆ ನೀವು ಕೂಡಲೇ ಗೊಂದಲಕ್ಕೆ ಸಿಲುಕಿ ಹಣ ಹಿಂಪಡೆದುಕೊಳ್ಳುವ ತೀರ್ಮಾನಕ್ಕೆ ಬರಬಾರದು. ಮಾರುಕಟ್ಟೆಯ ಸ್ಥಿತಿಗಳನ್ನು ಸರಿಯಾಗಿ ಅವಲೋಕಿಸಿ ಮುನ್ನಡೆಯಬೇಕು.

### ಸುಲಭವಾಗಿ ಸಿಗುತ್ತೆ ಅಂತ ಸಾಲ ಮಾಡಬೇಡಿ:

ನಾನು ಬಹಳಷ್ಟು ಜನರನ್ನು ಸಾಲ ಯಾಕೆ ಮಾಡಿದ್ದೀರಿ ಎಂದು ಕೇಳಿದಾಗ ಅವರಿಂದ ಬರುವ ಉತ್ತರ ಸಾಲ ಸಿಗುತ್ತೆ ಅಂದ್ರು ಅದಕ್ಕೆ ಸಾಲ ತೆಗೆದುಕೊಂಡ್ವಿ ಅಂತ. ಹೀಗೆ ಗೊತ್ತು ಗುರಿಯಿಲ್ಲದೆ ಸಾಲ ಮಾಡುವವರ ಸಂಖ್ಯೆಯೇ ಹೆಚ್ಚು. 25ರಿಂದ60 ರ ವಯಸ್ಸಿನಲ್ಲಿರುವಾಗ ಹಲವು ರೀತಿಯ ಜವಾಬ್ದಾರಿಗಳಿರುತ್ತವೆ. ಗೃಹ ಸಾಲ, ಪರ್ಸನಲ್ ಲೋನ್, ಕ್ರೆಡಿಟ್ ಕಾರ್ಡ್, ಇಎಂಐ ಹೀಗೆ ಹತ್ತಾರು ಬಗೆಯ ಸಾಲಗಳನ್ನು ಪಡೆಯುವಾಗ ಮುಂದೆ ಎದುರಿಸಬಹುದಾದ ಸಮಸ್ಯೆಗಳ ಬಗ್ಗೆ ಅರಿವಿರಬೇಕು. ಎಲ್ಲ ಮಾದರಿಯ ಸಾಲಗಳನ್ನು ಮಾಡಿಕೊಂಡು ತಿಂಗಳ ಸಂಬಳದಲ್ಲೇ ಅವನ್ನು ತೀರಿಸುತ್ತೇವೆ ಎನ್ನುವುದು ಮೂರ್ಖತನವಾಗುತ್ತದೆ. ಶೇ 8.5 ರಿಂದ ಶೇ.13 ರಷ್ಟಿರುವ ಬಡ್ಡಿದರದ ಸಾಲದ ಹೊರೆಯನ್ನು ಇಳಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಸರಳವಾಗಿ ಹೇಳುವುದಾದರೆ ಹಾಸಿಗೆ ಇದ್ದಷ್ಟು ಮಾತ್ರ ಕಾಲು ಚಾಚಬೇಕು ಎನ್ನುವ ಗಾದೆಯನ್ನು ಅರಿತು ಮುನ್ನಡೆದರೆ ಸಂಕಷ್ಟ ನಿಮ್ಮ ಹತ್ತಿರ ಸುಳಿಯುವುದಿಲ್ಲ.

### ಯಾರದ್ದೋ ಮಾತು ಕೇಳಿ ಹೂಡಿಕೆ ಮಾಡಬೇಡಿ:

ಬಹಳಷ್ಟು ಜನರಲ್ಲಿ ಸ್ನೇಹಿತರನ್ನು, ಸಂಬಂಧಿಕರನ್ನು, ಇನ್ಶೂರೆನ್ಸ್ ಏಜೆಂಟ್‌ಗಳನ್ನು ಅವಲಂಬಿಸಿ ಹೂಡಿಕೆ ಮಾಡುವ ಪರಿಪಾಠವಿದೆ. ಈ ವಿಚಾರ ಯಾರಿಗೂ ಒಳ್ಳೆಯದಲ್ಲ. ನಿಮ್ಮ ಹೂಡಿಕೆ ನಿಮ್ಮ ಅಗತ್ಯ ಮತ್ತು ಆರ್ಥಿಕ ಸ್ಥಿತಿಗತಿಗೆ ಪೂರಕವಾಗಿರಬೇಕು. ನಿಮ್ಮ ಸ್ನೇಹಿತರು, ಸಂಬಂಧಿಕರು ಅವರ ಅಗತ್ಯಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಮಾಡಿರುತ್ತಾರೆ. ಇನ್ನು ಇನ್ಶೂರೆನ್ಸ್ ಏಜೆಂಟ್ ನಿಮಗೆ ಅನುಕೂಲವಾಗುವ ಪ್ರಾಡಕ್ಟ್‌ಗಿಂತ ಅವರಿಗೆ ಅನುಕೂಲವಾಗುವ ಪ್ರಾಡಕ್ಟ್ ಅನ್ನೇ ಮಾರಾಟ ಮಾಡಲು ಪ್ರಯತ್ನಿಸುತ್ತಾರೆ. ಹಾಗಾಗಿ ನಿಮ್ಮ ಆಯ್ಕೆ ನಿಮ್ಮ ಅಗತ್ಯಕ್ಕೆ ಪೂರಕವಾಗಿರಲಿ.

### ಅರಿವಿಲ್ಲದ ಕಡೆ ಹೂಡಿಕೆ ಮಾಡಬೇಡಿ:

ಕಬ್ಬಿಣದ ಕಡಲೆ ಬಿಡಿ, ಸುಲಿದ ಬಾಳೆಯ ಹಣ್ಣು ಹಿಡಿ ಎಂಬುದೇ ವಾರನ್ ಬಫೆಟ್ ನುಡಿ. ಯಾವುದು ನಮಗೆ ಸ್ಪಷ್ಟ ಹಾಗು ಸರಳ ಅನಿಸುತ್ತದೋ ಅಲ್ಲಿಯೇ ಹಣ ಹೂಡಬೇಕು ಎನ್ನುವುದು ವಾರನ್ ಬಫೆಟ್ ಸಲಹೆ. ನಾನು ಕೂಡ ಇದನ್ನೇ ಪುನರುಚ್ಚರಿಸುತ್ತೇನೆ. ನಮಗೆ ಯಾವುದರ ಬಗ್ಗೆ ತಿಳುವಳಿಕೆ ಇದೆಯೋ. ಯಾವುದು ಕಷ್ಟ ಅನಿಸುವುದಿಲ್ಲವೋ ಅಲ್ಲಿಯೇ ಹೂಡಿಕೆ ಮಾಡಬೇಕು. ಅರ್ಥವಾಗದ ಕ್ಷೇತ್ರದಲ್ಲಿ ಹೂಡಿಕೆ ಮಾಡಿದರೆ ಭವಿಷ್ಯದಲ್ಲಿ ನಿಮ್ಮ ಲಾಭ ಅತಂತ್ರವಾಗುತ್ತದೆ.

### ಇನ್ಶೂರೆನ್ಸ್ ಮತ್ತು ಹೂಡಿಕೆ ನಡುವಿನ ವ್ಯತ್ಯಾಸ ತಿಳಿಯಿರಿ:

ಅನೇಕರು ಇನ್ಶೂರೆನ್ಸ್ ಮತ್ತು ಹೂಡಿಕೆ ಎರಡನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತಾರೆ. ಆದರೆ ಇನ್ಶೂರೆನ್ಸ್ ಅನ್ನು ಹೂಡಿಕೆ ಎಂದು ತಿಳಿಯಬಾರದು. ಇನ್ಶೂರೆನ್ಸ್ ನಿಮ್ಮ ಪಾಲಿನ ರಕ್ಷಾ ಕವಚ. ಸಂಕಷ್ಟದ ಸಮಯದಲ್ಲಿ ಅದು ನಿಮ್ಮ ನೆರವಿಗೆ ಬರುತ್ತದೆ. ಹೂಡಿಕೆ ಎಂದರೆ ನೀವು ಗಳಿಸಿರುವ ಹಣವನ್ನು ಮತ್ತಷ್ಟು ಹೆಚ್ಚು ಮಾಡಲು ಇರುವ ಮಾರ್ಗ. ಹೂಡಿಕೆಯಿಂದ ಸಂಪತ್ತು ವೃದ್ಧಿಯಾದರೆ ಇನ್ಶೂರೆನ್ಸ್ ಅನಿಶ್ಚಿತ ಸಂದರ್ಭಗಳನ್ನು ಎದುರಿಸಲು ನೆರವು ನೀಡುತ್ತದೆ. ಹಾಗಾಗಿ ನೀವು ಇನ್ಶೂರೆನ್ಸ್ ಹೊಂದುವುದು ಅವಶ್ಯಕ.

### ಒಂದೇ ಕಡೆ ಹೂಡಿಕೆ ಸಲ್ಲದು:

ಮಾನವ ಆರೋಗ್ಯವಾಗಿರಬೇಕಾದರೆ, ಸಮತೂಕದ ಆಹಾರ ಅಗತ್ಯ. ಅಂತೆಯೇ ಉಳಿತಾಯದಲ್ಲಿಯೂ ಸಮತೋಲನ ಕಾಯ್ದುಕೊಳ್ಳುವುದು ಅಗತ್ಯ. ಒಂದೇ ಕಡೆ ಹೆಚ್ಚು ಹೂಡಿಕೆ ಮಾಡಿದಾಗ ಆ ಕಂಪನಿ ನಷ್ಟ ಅನುಭವಿಸಿದರೆ ನಿಮಗೂ ದೊಡ್ಡ ಮಟ್ಟದಲ್ಲಿ ನಷ್ಟವಾಗುತ್ತದೆ. ನಿಮ್ಮ ಹೂಡಿಕೆ ವಿವಿಧ ಕಂಪನಿಗಳಲ್ಲಿ ಹಾಗೂ ವಿವಿಧ ಮಾದರಿಗಳಲ್ಲಿ ಇದ್ದಾಗ ರಿಸ್ಕ್ ಪ್ರಮಾಣ ಕಡಿಮೆ. ಉದಾಹರಣಗೆ: ಸೈಟ್ ಖರೀದಿ, ಕೃಷಿ ಭೂಮಿ ಖರೀದಿ, ಪಿಪಿಎಫ್ ಹೂಡಿಕೆ, ಎಫ್ ಡಿ, ಮ್ಯೂಚುವಲ್ ಫಂಡ್ ಖರೀದಿ, ಷೇರು ಪೇಟೆ ಹೂಡಿಕೆ, ಪೆನ್ಷನ್ ಸ್ಕೀಂ ನಲ್ಲಿ ಹೂಡಿಕೆ ಹೀಗೆ ಹತ್ತಾರು ಕಡೆ ಹೂಡಿಕೆ ಮಾಡಿದಾಗ ಭದ್ರತೆ ಹೆಚ್ಚು.

IndianMoney.com ™

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111